13.	ದಕ್ಷಿಣ ಕನ್ನಡ	726	250	976
14.	ಬೆಳಗಾಂ	1178	400	1578
15.	ವಿಜಾಪುರ	580	400	980
16.	ಧಾರವಾಡ	1123	400	1523
17.	ಉತ್ತರ ಕನ್ನಡ	731	150	881
18.	ಗುಲ್ಬರ್ಗಾ	733	400	1133
19.	ಬೀದರ್	664	150	814
20.	ರಾಯಚೂರು	902	300	1202
21.	ಬಳ್ಳಾರಿ	616	220	836
		13650	5000	18650

ವಿಷಯ: ರಾಜ್ಯದಲ್ಲಿ ಕುಷ್ಠರೋಗಿಗಳ ಪುನರ್ವಸತಿ ಕಾರ್ಯಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 161 (500)

ಎಸ್.ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕುಷ್ಠರೋಗಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ಕುಷ್ಠರೋಗಿಗಳ ಪುನರ್ವಸತಿ ಕೇಂದ್ರಗಳು ರಾಜ್ಯದಲ್ಲಿ ಯಾವ ಸ್ಥಳಗಳಲ್ಲಿವೆ?

ಇ) ಈ ಕೇಂದ್ರಗಳಲ್ಲಿ ಇದುವರೆಗೂ ಕೈಗೊಂಡಿರುವ ಕಾರ್ಯಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕುಷ್ಠರೋಗಿಗಳ ಸಂಖ್ಯೆ
1.	ಬೆಂಗಳೂರು ನಗರ	855
2.	ಬೆಂಗಳೂರು (ಗ್ರಾ)	520
3.	ಚಿತ್ರದುರ್ಗ	660
4.	ಕೋಲಾರ	1108

5.	ಶಿವಮೊಗ್ಗ	473
6.	ತುಮಕೂರು	486
7.	ಬೆಳಗಾವಿ	1263
8.	ವಿಜಾಪುರ	2026
9.	ಧಾರವಾಡ	1621
10.	ಉತ್ತರ ಕನ್ನಡ	470
11.	ಬಳ್ಳಾರಿ	2043
12.	ಬೀದರ್	836
13.	ಗುಲ್ಬರ್ಗಾ	1301
14.	ರಾಯಚೂರು	1854
15.	ಚಿಕ್ಕಮಗಳೂರು	150
16.	ದಕ್ಷಿಣ ಕನ್ನಡ	666
17.	ಹಾಸನ	95
18.	ಕೊಡಗು	17
19.	ಮಂಡ್ಯ	381
20.	ಮೈಸೂರು	1177
	ಒಟ್ಟು	18003

ರಾಜ್ಯದಲ್ಲಿ 1966 ಮೇ ಅಂತ್ಯದವರೆಗೆ 18003 ಕುಷ್ಠರೋಗಿಗಳಿದ್ದಾರೆ.

ಆ) ರಾಜ್ಯ ಸರ್ಕಾರ

1) ಗುಲ್ಬರ್ಗಾ

2) ಬೆಳಗಾಂ ಜಿಲ್ಲೆಯ ಖಾನ್‌ಗಾವ್

ಖಾಸಗಿ

3) ನವಜೀವನ ನಿಲಯ, ಬೆಂಗಳೂರು

4) ಸುಮನಹಳ್ಳಿ ಯೋಜನೆ ಬೆಂಗಳೂರು

5) ಕರುಣಾ ಟ್ರಸ್ಟ್, ಯಳಂದೂರು ಟಿ.ನರಸೀಪುರ ತಾ. ಮೈಸೂರು ಜಿಲ್ಲೆ

6) ಅಂಗವಿಕಲರ ಆಸ್ಪತ್ರೆ, ಹುಬ್ಬಳ್ಳಿ

7) ಬೈಟ್ ಇಂಡಿಯ, ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ.

8) ಸೆಂಟ್ ಜೋಸೆಫ್ ಲೆಪ್ರಸಿ ಆಸ್ಪತ್ರೆ ಕನಕನಾಡಿ, ದಕ್ಷಿಣ ಕನ್ನಡ ಜಿಲ್ಲೆ

ಇ) ಈ ಕೇಂದ್ರಗಳಲ್ಲಿ ರೋಗ ಉಲ್ಬಣಗೊಂಡ ಕುಷ್ಠರೋಗಿಗಳನ್ನು ಸೇರಿಸಿಕೊಂಡು ಅವರಿಗೆ ಚಿಕಿತ್ಸೆ ನೀಡಿ ಮತ್ತು ಅಂಗವಿಕಲ ರೋಗಿಗಳಿಗೆ ಬೇಕಾದ ಶಸ್ತ್ರ ಚಿಕಿತ್ಸೆ ಮಾಡಿ, ಅವರಿಗೆ ಬೇಕಾದ ವೃತ್ತಿಪರ ಕೆಲಸಗಳನ್ನು ಕಲಿಸಿ ಸಮಾಜದಲ್ಲಿ ಎಲ್ಲರಂತೆ ಜೀವನ ಮಾಡಲು ಈ ಕೇಂದ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ.

ವಿಷಯ: ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಬಂದಿರುವ ಅರ್ಜಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 162 (110)

ಶ್ರೀ ಹೆಚ್.ಶಿವಪ್ಪ (ಹರಿಹರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಕೋರಿ ಖಾಸಗಿ ಸಂಸ್ಥೆಗಳಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು? ಮತ್ತು ಅವುಗಳಲ್ಲಿ ಮಂಜೂರಾತಿಯಾದ ಸಂಖ್ಯೆಗಳೆಷ್ಟು?

ಆ) ಆಂಗ್ಲ ಶಾಲೆ ತೆರೆಯಲು ಮಂಜೂರಾತಿ ನೀಡಲು ಸರ್ಕಾರದವರಿಗೆ ಇರುವ ತೊಂದರೆಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1996-97ನೇ ಸಾಲಿಗೆ ಖಾಸಗಿ ಸಂಸ್ಥೆಗಳಿಂದ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಬಂದಿರುವ

	ಪ್ರೌಢ ಶಾಲೆಗಳು	ಹಿರಿಯ ಪ್ರಾಥಮಿಕ ಶಾಲೆಗಳು
ಅರ್ಜಿಗಳ ಸಂಖ್ಯೆ	214	154
ಮಂಜುರಾದ ಸಂಖ್ಯೆ	109	99

ಆ) ಸರ್ಕಾರದ ಆದೇಶ ಸಂಖ್ಯೆ : ಇಡಿ 28 ಪಿಜಿಸಿ 94 ದಿನಾಂಕ 29-4-94ರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅನುಸರಿಸಬೇಕಾದ ಭಾಷಾ ನೀತಿಯನ್ನು ಹೊರಡಿಸಿದೆ. ಅದರನ್ವಯ 1ರಿಂದ4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷೆಯಲ್ಲಿ ತರಗತಿಗಳನ್ನು ನಡೆಸುವುದು ಕಡ್ಡಾಯವಾಗಿದೆ. 5ನೇ ತರಗತಿಯಿಂದ ಆಂಗ್ಲ ಭಾಷೆಯಲ್ಲಿ ತರಗತಿಗಳನ್ನು ನಡೆಸಲು ಕೋರಿದಲ್ಲಿ ಅದರಂತೆ ಪರಿಶೀಲಿಸಿ 5ನೇ